**ಒಎಸ್. 266/2011**

**ಪಿಡಬ್ಲ್ಯು. 1**

**ಸಾಕ್ಷಿಯನ್ನು ದಿಃ 31.08.2017 ರಂದು ಕರೆಸಿ ಪ್ರಮಾಣ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಃ ವಾದಿಯರ ಪರ ಶ್ರೀ ಎಂ ವಿ ಜೆ ವಕೀಲರಿಂದಃ**

ಈಗ ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ನ್ಯಾಯಾಲಯಕ್ಕೆ ಸಲ್ಲಿಸುತ್ತಿದ್ದೇನೆ ಹಾಗೂ ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ನನಗೆ ತಿಳಿದಿದ್ದು ಮತ್ತು ಸಂಗತಿಗಳು ಸತ್ಯವಾಗಿರುತ್ತವೆ ಮತ್ತು ನಾನು ಅದಕ್ಕೆ ನನ್ನ ಸಹಿಯನ್ನು ಹಾಕಿರುತ್ತೇನೆ.

ಪ್ರತಿವಾದಿಯು ದಾವಾಸ್ತಿ ಬಗ್ಗೆ ದಿಃ7.4.2011 ರಲ್ಲಿ ಬರೆದುಕೊಟ್ಟ ಕ್ರಯ ಕರಾರು ಪತ್ರದ ನೊಂದಾಯಿತವಾಗದ ಅಸಲು ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿ ಪಿ 1 ಎಂದು, ದಾವಾ ಸ್ವತ್ತಿನ ಬಗ್ಗೆ ಪಟ್ಟಾ ರಸೀದಿ ಪುಸ್ತಕವನ್ನು ಹಾಜರುಪಡಿಸಿದ್ದು ನಿ ಪಿ 2 ಎಂದು, ದಾವಾ ಸ್ವತ್ತು ಪ್ರತಿವಾದಿಗೆ ಮಂಜೂರಾದ ಬಗ್ಗೆ ಸಾಗುವಳಿ ಚೀಟಿಯ ಬಗೆಗಿನ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು ನಿ ಪಿ 3 ಎಂದು, ದಾವಾ ಸ್ವತ್ತಿನ ಬಗ್ಗೆ 1 ಎಂ. ಆರ್. ನ್ನು ಹಾಜರುಪಡಿಸಿದ್ದು ನಿ ಪಿ 4 ಎಂದು, ದಾವಾ ಸ್ವತ್ತಿನ ಬಗ್ಗೆ 3 ಪಹಣಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿ ಪಿ 5 ರಿಂದ 7 ಎಂದು ಗುರುತಿಸಲಾಯಿತು.

**ಪ್ರತಿವಾದಿಗಳು ಏಕಪಕ್ಷೀಯವಾಗಿದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖ ನದಂತೆ ಬೆರಳಚ್ಚು ಮಾಡಲಾಗಿದೆ).**

**ಓ ಹೇ ಕೇ ಸರಿ ಇದೆ.**

**(ಎ.ಸಿ. ದಯಾನಂದ ಮೂರ್ತಿ)**

ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ,

ಬಂಗಾರಪೇಟೆ.